Police opening fire on rice smugglers from Talakad to Madras State.

ಪ್ರಶ್ನೆ 30.—ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ತಲೆಕಾಡಿನಿಂದ ಮದ್ರಾಸು ಪ್ರಾಂತಕ್ಕೆ ಈ ತಿಂಗಳಿನ ಸರಿಸುಮಾರು 17ನೆಯ ತಾರೀಖಿನ ದಿನ ಕಳ್ಳತನದಿಂದ ಅಕ್ಕಿಯನ್ನು ಕೆಲವರು ಸಾಗಿಸುತ್ತಿದ್ದರೆಂಬ ವರ್ತಮಾನ ಬಂದುದರಿಂದ ಅಕ್ಕಿಯನ್ನು ಕಳ್ಳತನದಿಂದ ಸಾಗಿಸುತ್ತಿದ್ದವರ ಮೇಲೆ ಪೋಲೀಸಿನವರು ಗುಂಡುಹಾರಿಸಿದುದು ನಿಜವೆ ;

(b) ಹಾಗೆ ಗುಂಡು ಹಾರಿಸಿದುದರಿಂದ ಯಾರಿಗಾದರೂ ಜಖಂ ಆಯಿತೆ ; ಯಾರನ್ನಾದರೂ ದಸ್ತಗಿರಿ ಮಾಡಲಾಗಿದೆಯೆ, ಅಕ್ಕಿಯನ್ನಾಗಲಿ ಅಥವಾ ಬತ್ತವನ್ನಾಗಲಿ ಹಿಡಿದು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆಯೆ ; ಹಾಗಿದ್ದಲ್ಲಿ ಅದರ ಪರಿಮಾಣವೆಷ್ಟು ;

(c) ಆಹಾರ ಧಾನ್ಯಗಳನ್ನು ಸಂಸ್ಥಾನದಿಂದ, ನೆರೆಹೊರೆ ಪ್ರಾಂತಗಳಿಗೂ ಮತ್ತು ಆ ನೆರೆಹೊರೆ ಪ್ರಾಂತಗಳಿಂದ ನಮ್ಮ ಸಂಸ್ಥಾನಕ್ಕೂ ಕಳ್ಳತನದಲ್ಲಿ ಸಾಗಿಸಿರುವುದಾಗಿ ಈ ವರ್ಷದ ಪ್ರಾರಂಭದಿಂದ ವರದಿಯಾಗಿರುವ ಸಂಖ್ಯೆ ಎಷ್ಟು ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ನಟಿವರು).—

(a) ಹೌದು, ನಿಜ.

(b) ಹೌದು.

(1) ಗುಂಡು ಹಾರಿಸಿದುದರಿಂದ ಜಖಂ ಆದವರ ಸಂಖ್ಯೆ ... ಒಂದು

(2) ದಸ್ತಗಿರಿ ಆದವರ ಸಂಖ್ಯೆ ... ಮೂರು (ಜಖಂ ಆದವರ ಸಂಖ್ಯೆಯೂ ಸೇರಿದೆ.)

(3) ಹಿಡಿದು ಸ್ವಾಧೀನಕ್ಕೆ ತೆಗೆದುಕೊಂಡಿರುವ ಅಕ್ಕಿ ಅಥವಾ ಬತ್ತದ ಪರಿಮಾಣ. 60 ಚೀಲಗಳ ಅಕ್ಕಿ ಮತ್ತು ಬತ್ತ.

(c) ಈ ವಿವರವು ಸಿದ್ಧವಾಗಿ ದೊರೆಯುವಂತಿಲ್ಲ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ತಲಕಾಡು ಬಳಿ ಅಕ್ಕಿಯನ್ನು ಸಾಗಿಸುತ್ತಾ ಇದ್ದಾಗ ಫೈರಿಂಗ್ ಆದ ನಂದರ್ಭದಲ್ಲಿ ಜಖಂ ಆದವರು ಒಬ್ಬರು ಎಂದು ನಮೂದಿಸಿದೆ. ಅವರು ಯಾವ ಸ್ಥಿತಿಯಲ್ಲಿದ್ದಾರೆ ?

*ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಸ್ಪತ್ರೆಯೊಳಗೆ ಚಿಕಿತ್ಸೆ ಹೊಂದುತ್ತಾ ಇದ್ದಾರೆ. ಇತ್ತೀಚಿನ ವರದಿ ಪ್ರಕಾರ ಉಳಿದುಕೊಳ್ಳುತ್ತಾರೆ ಎಂದು ತಿಳಿದು ಬಂದಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಆ ದಿನ ಫೋಲೀಸ್ ಫೈರಿಂಗ್ ನಡೆದಾಗ ಎಷ್ಟು ಜನ ಪೋಲೀಸ್‌ನವರು ಇದ್ದರು, ಎಷ್ಟು ಜನ ಸ್ಮಗ್ಲರ್ಸ್ ಇದ್ದರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ಮಗ್ಲರ್ಸ್ ಸುಮಾರು 60 ಜನ ಇದ್ದರು. ಪೋಲೀಸ್‌ನವರು ಒಬ್ಬ ದಫೇದಾರ್ ಒಬ್ಬ ಜಮಾದಾರ್, 8 ಜನ ಕಾನ್ಸ್ಟೇಬಲ್ಸ್ ಇದ್ದರು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಫೈರಿಂಗ್ ಮಾಡುವುದಕ್ಕೆ ಒಬ್ಬ ಸಬ್ ಇನ್‌ಸ್ಪೆಕ್ಟರ್ ಆಗಲೀ ಅಥವಾ ಇನ್‌ಸ್ಪೆಕ್ಟರಾಗಲೀ ಇದ್ದು ಆರ್ಡರ್ ಕೊಡಬೇಕೇ ಅಥವಾ ಜಮಾದಾರನಿಗೇ ಅಧಿಕಾರ ವಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ನಂದರ್ಭದಲ್ಲಿ ಆತ್ಮರಕ್ಷಣೆಗೆ ಫೈರಿಂಗ್ ಮಾಡಿದ್ದಾರೆ. ಸ್ಮಗ್ಲರ್ಸ್ ಕುಡುಗೋಲು, ಮಚ್ಚು ಹಿಡಿದುಕೊಂಡು ಮೇರೆ ಬೀಳುವುದಕ್ಕೆ ಬಂದಾಗ ಆ ಸಮಯದಲ್ಲಿ ಮಾಡಿರತಕ್ಕದ್ದು ಇದು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಸ್ಮಗ್ಲಿಂಗ್ ಆಗದಂತೆ ನೋಡಿಕೊಳ್ಳಬೇಕೆಂದಿರುವುದರಿಂದ ಮೈಸೂರು ದೇಶದ ಎಲ್ಲಾ ಗಡೀ ಪ್ರದೇಶದಲ್ಲೂ ಪೋಲೀಸ್ ಔಟ್ ಪೋಸ್ಟ್ ಇವೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಗಡೀ ಪ್ರದೇಶದಲ್ಲೂ ಪೋಲೀಸ್ ಔಟ್‌ಪೋಸ್ಟ್ ಇವೆ, ಗಾರ್ಡ್ ಮಾಡುತ್ತಾ ಇದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಆ ಔಟ್ ಪೋಸ್ಟ್‌ಗಳಲ್ಲಿ ತಕ್ಕ ಶಿಬ್ಬಂದಿ ಇದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಕ್ಕಷ್ಟು ಶಿಬ್ಬಂದಿ ಕೊಟ್ಟಿದ್ದೇವೆ. ಅವರೆಲ್ಲಾ ಪೂರ್ಣ ಶಸ್ತ್ರಸಜ್ಜಿತರಾಗಿದ್ದಾರೆ.

ಶ್ರೀ ಎಸ್ ರಂಗರಾವಯ್ಯನವರು (ಮೈಸೂರು ಜಿಲ್ಲೆ).—ಅವರು ಎಲ್ಲರೂ ಮೈಸೂರಿನವರೇ ಅಥವಾ ಕೊಳ್ಳೇಗಾಲದವರೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈಸೂರಿನವರೆ.

ಶ್ರೀ ಎಸ್. ರಂಗರಾಮಯ್ಯನವರು.—ಹೊರಗಡೆಯವರು ಯಾರಾದರೂ ಇದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಬಗ್ಗೆ ಇನ್ನು ಸಮಾಚಾರ ಬಂದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಹೊರಗಿನವರು ಯಾರಾದರೂ ಇದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಕೊಳ್ಳೇಗಾಲದ ಪೋಲೀಸಿನವರೊಡನೆ ಸಂಪರ್ಕ ಇಟ್ಟಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಸಂಪರ್ಕ ಇಟ್ಟಿದ್ದೇವೆ, ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಮೂರು ಜನ ಸಿಕ್ಕಿದ್ದಾರೆ, ಮಿಕ್ಕಾದವರು ಎಷ್ಟು ಜನ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಮಾಚಾರ ಬಂದಿರುವ ಪ್ರಕಾರ 60 ಜನ 60 ಮೂಟೆ ಧಾನ್ಯವನ್ನು ಕಳ್ಳತನದಿಂದ ಸಾಗಿಸಿಕೊಂಡು ಹೋಗುವುದಕ್ಕೆ ಪ್ರಯತ್ನಪಡುತ್ತಿದ್ದರು. ಆ ಸಮಯದಲ್ಲಿ ಅವರನ್ನು ಹಿಡಿದುಕೊಳ್ಳುವುದಕ್ಕೆ ಹೋದ ತಕ್ಷಣ ಮೂಟೆಗಳನ್ನು ಕೆಳಗೆ ಹಾಕಿ ಪೋಲೀಸಿನವರಮೇಲೆ ಬೀಳುವುದಕ್ಕೆ ಬಂದರು. ಆಗ he had to protect himself by shooting down one person.

ಶ್ರೀ ಎಸ್. ರಂಗರಾಮಯ್ಯನವರು.—ಅಷ್ಟೂ ಅಕ್ಕಿನೋ, ಬತ್ತನೂ ಇದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಮೂಟೆ ಅಕ್ಕಿ, ಕೆಲವು ಮೂಟೆ ಬತ್ತ, ಒಟ್ಟು 60 ಮೂಟೆ.

ಶ್ರೀ ಎಸ್. ರಂಗರಾಮಯ್ಯನವರು.—ಅದನ್ನೆಲ್ಲಾ ವಶಪಡಿಸಿಕೊಂಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

Mr. SPEAKER.—Short Notice Question No. 20.